ಎಕಾನಾಮಿಕಲಿ ವೆಯಬಲ್ ಆಗಬೇಕಾದರೆ ಇದು ಮಾಡತಕ್ಕದ್ದು ಅವಶ್ಯಕ ಇದೆ ಎಂದು ಹೇಳಿದ್ದಾರೆ. ಅದು ನಮ್ಮ ಪರಿಶೀಲನೆಯಲ್ಲಿದೆ. ಸಧ್ಯಕ್ಕೆ ಈಗ ಕಾರ್ಪೊರೇಷನ್ ಅನ್ನು ಫಾರಂ ಮಾಡುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾಡುವಾಗ ಬೀದರ್ ಅನ್ನು ಗಮನದಲ್ಲಿಟ್ಟುಕೊಳ್ಳುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾಡುವಾಗ ನ್ಯಾಚುರಲಿ ಎಲ್ಲೆಲ್ಲಿ ವಯಬಲ್ ಇದೆ, ಅಲ್ಲೆಲ್ಲಾ ಈ ಸ್ಕೀಮ್ ಎಕ್ಸ್‌ಟೆಂಡ್ ಆಗುತ್ತದೆ.

ವಾಲೀಕಾರಿ ಹಾಗೂ ಇನಾಂ ಜಮೀನುಗಳನ್ನು ಸಕ್ರಮಗೊಳಿಸುವುದು.

1282 - ಶ್ರೀ ಮನೋಹರ, ಐನಾಪುರ (ಬಳ್ಳೊಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾಲೀಕಾರಿ ಜಮೀನು ಹಾಗೂ ಇನಾಂ ಭೂಮಿಯನ್ನು ಖಾಯಗೊಳಿಸಲು ಸರ್ಕಾರವು ಉದ್ದೇಶಿಸಿದೆಯೇ?

ಆ) ಹಾಗಾದರೆ ಯಾವಾಗ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಕರ್ನಾಟಕ ಗ್ರಾಮ ಕಛೇರಿಗಳ ಇನಾಂ ರದ್ದಿಯಾತಿ ಕಾಯ್ದೆ 1961 ತಿದ್ದುಪಡಿ ಕಾಯ್ದೆ 1978ರ ನಿಯಮ 4 ಉಪ ನಿಯಮ (1) ರಂತೆ ಅಧಿಭೋಗದಾರಿಕೆ ಹಕ್ಕು-ದಾರಿಕೆಗಾಗಿ (ಮರು-ಮಂಜೂರಾತಿಗಾಗಿ) ಅರ್ಜಿ ಸಲ್ಲಿಸಲು 30-6-91 ರವರೆಗೆ ಕಾಲಾವಕಾಶವನ್ನು ವಿಸ್ತರಿಸಲು ಕರಡು ಅಧಿಸೂಚನೆ ಹೊರಡಿಸಲಾಗಿದೆ

ಆ) ಮೇಲೆ ಹೇಳಿದಂತೆ

ಶ್ರೀ ಮನೋಹರ್ ಐನಾಪುರ್ : ಮಾನ್ಯ ಅದ್ಯಕ್ಷರೆ, ಹೆಚ್ಚಾಗಿ ಈ ಜಮೀನುಗಳನ್ನು ಹರಿಜನ ಗಿರಿಜನರಿಗೆ, ಹಿಂದುಳಿದ ವರ್ಗದವರಿಗೆ, ಬಡ ರೈತರಿಗೆ ನೀಡಲಾಗಿದ್ದು, ಸದರಿ ಜಮೀನಿನಿಂದ ಯಾವ ರೀತಿ ಸರ್ಕಾರದಿಂದ ಸಾಲ ಸೌಲಭ್ಯಗಳು ಸಿಗದೆ ತೊಂದರೆಯಾಗಿದೆ. ಈಗ ರೆಗ್ಯುಲರೈಸ್ ಮಾಡಿದ ನಂತರ ಡಾ : ಅಂಬೇಡ್ಕರ್‌ರವರ ಜನ್ಮ ಶತಾಬ್ದಿ ವರ್ಷವಾಗಿರುವುದರಿಂದ ಸರ್ಕಾರ ಈ ಬಡ ರೈತರಿಗೆ ವಿಶೇಷ ಸಾಲದ ಸೌಲಭ್ಯ ಕಲ್ಪಿಸುವ ವಿಚಾರ ಏನಾದರೂ ಮಾಡಿದ್ದೀರ ಎಂದು ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ಈ ಒಂದು ಕಾನೂನಿಗೆ ತಿದ್ದುಪಡಿಯನ್ನು ಕೊಟ್ಟಿದ್ದೇವೆ. ಅಬ್ಜೆಕ್ಷನ್ ಕಾಲ್‌ಫರ್ ಮಾಡಿದ್ದೇವೆ. 15 ದಿವಸ ಆದಮೇಲೆ ಯಾವ್ಯಾವ ಅಬ್ಜೆಕ್ಷನ್ ಬಂದಿದೆ ಅದನ್ನು ನೋಡಿ ರೀಗ್ರಾಂಟ್ ಮಾಡತಕ್ಕದ್ದನ್ನು ಮಾಡುತ್ತೇವೆ. ಇನ್‌ಫೀರಿಯ ವಿಲೇಜ್ ಆಫೀಸರ್ಸ್ ಅಬಾಲಿಷನ್ ಆಕ್ಟ್‌ನ ಸೆಕ್ಷನ್ 4ರ ಕೆಳಗಡೆ ಗ್ರಾಂಟ್ ಈ ಜಮೀನುಗಳನ್ನು ಸಾವು ಮಾಡಬೇಕಾಗುತ್ತದೆ. ರೀಗ್ರಾಂಟ್ ಮಾಡಿದ ಮೇಲೆ they will get full Patta rights. ಆಮೇಲೆ ಪಿಎಲ್‌ಡಿ ಬ್ಯಾಂಕ್‌ನಿಂದ ಸಾಲ ಅಥವಾ ಬೇರೆ ಎಲ್ಲಾ ಸವಲತ್ತುಗಳನ್ನು ಅದರಿಂದ ಪಡೆಯಬಹುದು.

ಶ್ರೀ ಮನೋಹರ್ ಐನಾಪುರ್ : ವಿಶೇಷ ಹಣವನ್ನು ಏನಾದರೂ ಒದಗಿಸುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಮಾಜ ಕಲ್ಯಾಣ ಇಲಾಖೆ ಏನಾದರೂ ಕಾರ್ಯಕ್ರಮ ಹಾಕಿಕೊಂಡರೆ ಖಂಡಿತವಾಗಿ ಮಾಡುತ್ತೇವೆ. ನಾವು ಕೊಡತಕ್ಕದ್ದನ್ನು ರೀಗ್ರಾಂಟ್ ಮಾಡಿಕೊಡುತ್ತೇವೆ. ಉಳಿದಿದ್ದನ್ನು The Social Welfare Department will take up developmental activities.